ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ವಿಷಯ:** ನಿಗಮದ ವಿಕಲ ಚೇತನ (ಅಂಗವಿಕಲ) ನೌಕರರು ಮೋಟಾರು ಚಾಲಿತ/ ಯಾಂತ್ರಿಕ(ಮೆಕ್ಯಾನಿಕಲ್) ವಾಹನಗಳನ್ನು ಖರೀದಿಸಲು ನೀಡಲಾಗುತ್ತಿರುವ ಸಹಾಯಧನವನ್ನು ಪರಿಷ್ಕರಿಸುವ ಬಗ್ಗೆ.

*****

**<u>ಓದಲಾಗಿದೆ:-</u>**

1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3595/98-99, ದಿನಾಂಕ: 02.05.2015.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/3595/98-99, ದಿನಾಂಕ: 21.03.2017.
3. ಅಂಗವಿಕಲತೆಯುಳ್ಳ ನೌಕರರು ಮೋಟಾರು ಚಾಲಿತ/ ಯಾಂತ್ರಿಕ(ಮೆಕ್ಯಾನಿಕಲ್) ವಾಹನಗಳನ್ನು ಖರೀದಿಸಲು ನೀಡಲಾಗುತ್ತಿರುವ ಸಹಾಯಧನವನ್ನು ಪರಿಷ್ಕರಿಸಿ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 24 ಎಸ್‌ಆರ್‌ಪಿ 2018 (VIII) ದಿನಾಂಕ: 11.01.2019.
4. ನಿಗಮ ಕಾರ್ಯಾಲಯ ದಿನಾಂಕ: 20.04.2019 ರ ಟಿಪ್ಪಣಿ.

**<u>ಪೀಠಿಕೆ:</u>**

ನಿಗಮದ ವಿಕಲ ಚೇತನ (ಅಂಗವಿಕಲ) ನೌಕರರು ಕಚೇರಿಗೆ ಹೋಗಿ ಬರಲು ಬಳಸುವ ಮೋಟಾರು ಚಾಲಿತ/ಯಾಂತ್ರಿಕ (ಮೆಕ್ಯಾನಿಕಲ್) ವಾಹನಗಳನ್ನು ಖರೀದಿಸಲು ಸಹಾಯಧನವಾಗಿ ವಿಶೇಷ ವಾಹನದ ಬೆಲೆಯ ಶೇಕಡ 25 ರಷ್ಟನ್ನು ಗರಿಷ್ಟ ರೂ.25,000/- (ರೂಪಾಯಿ ಇಪ್ಪತ್ತೈದು ಸಾವಿರಗಳು ಮಾತ್ರ) ಗಳ ಮಿತಿಗೊಳಪಟ್ಟು ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರ ಹಿಂಬರಿಸಲು ನಿಗಮವು ಆದೇಶವನ್ನು ಹೊರಡಿಸಿರುತ್ತದೆ. ವಾಹನದ ಬೆಲೆ ಏರಿಕೆಯನ್ನು ಗಮನದಲ್ಲಿರಿಸಿ ರಾಜ್ಯ ಸರ್ಕಾರವು ವಿಶೇಷ ವಾಹನದ ಖರೀದಿಯ ಸಹಾಯ ಧನವನ್ನು ಪರಿಷ್ಕರಿಸಿ ಹೊರಡಿಸಿರುವ ಆದೇಶವನ್ನು ನಿಗಮವು ಅಳವಡಿಸಿಕೊಂಡು ಈ ಕೆಳಕಂಡಂತೆ ಆದೇಶಿಸಿದೆ:-

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3595/98-99, ಬೆಂಗಳೂರು ದಿನಾಂಕ:** 2 MAY 2019

ನಿಗಮದ ವಿಕಲ ಚೇತನ (ಅಂಗವಿಕಲ) ನೌಕರರು ಖರೀದಿಸುವ ಮೋಟಾರು ಚಾಲಿತ/ಯಾಂತ್ರೀಕೃತ (ಮೆಕ್ಯಾನಿಕಲ್) ವಾಹನಗಳಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು ವಿಶೇಷ ವಾಹನದ ಬೆಲೆಯ ಶೇ.30 ರಷ್ಟು ಗರಿಷ್ಟ **ರೂ.40,000/-(ರೂಪಾಯಿ ನಲವತ್ತು ಸಾವಿರಗಳು ಮಾತ್ರ)** ಗಳ ಮಿತಿಗೊಳಪಟ್ಟು **1ನೇ ಮೇ 2019** ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲು ನಿಗಮವು ಹರ್ಷಿಸುತ್ತದೆ. ಈ ಸೌಲಭ್ಯದ ಮಂಜೂರಾತಿಯು ಕೆಳಕಂಡ ಷರತ್ತು ಹಾಗೂ ನಿಬಂಧನೆಗಳ ಪೂರೈಕೆಗೆ ಒಳಪಟ್ಟಿರುತ್ತದೆ:-

(i) ಈ ಸೌಲಭ್ಯವು **ಕನಿಷ್ಟ ಶೇ.40 ಮತ್ತು ಅದಕ್ಕೂ ಹೆಚ್ಚಿನ** ಅಂಗವೈಕಲ್ಯತೆ (ಚಲನವಲನ ವೈಕಲ್ಯತೆ) ಹೊಂದಿರುವ ವಿಕಲ ಚೇತನ ನೌಕರರಿಗೆ ಮಾತ್ರ ಅನ್ವಯವಾಗುತ್ತದೆ.

(ii) ವಿಕಲ ಚೇತನ ನೌಕರರು ಅವರ ಚಲನವಲನ ವೈಕಲ್ಯತೆಯ ದೃಢೀಕರಣದ ಬಗ್ಗೆ ಸಕ್ಷಮ ವೈದ್ಯಕೀಯ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಹಾಗೂ ಈ ಉದ್ದೇಶಕ್ಕಾಗಿ ಖರೀದಿಸುವ ವಿಶೇಷ ವಾಹನದ ಬಿಲ್ಲನ್ನು ನೇಮಕಾತಿ ಪ್ರಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

(iii) ಈ ಸೌಲಭ್ಯವು ಸೇವೆಯಲ್ಲಿ **ಒಂದು ಬಾರಿ** ಮಾತ್ರ ಲಭ್ಯವಾಗುತ್ತದೆ. **ಈ ಮೊದಲು ಈ** ಸೌಲಭ್ಯವನ್ನು ಪಡೆದಿರುವ ನೌಕರರು ಪರಿಷ್ಕೃತ ದರದಲ್ಲಿ ಈ ಸೌಲಭ್ಯವನ್ನು **ಪುನಃ ಪಡೆಯಲು ಅರ್ಹರಿರುವುದಿಲ್ಲ.**

(iv) ಈ ಸೌಲಭ್ಯವನ್ನು ಮಂಜೂರು ಮಾಡಲು ನೇಮಕಾತಿ ಪ್ರಾಧಿಕಾರಿಯು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

"ಟಿಪ್ಪಣಿಯು ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟಿರುತ್ತದೆ"

ನಿರ್ದೇಶಕರು
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

www.kptcl.com/eprasarana for information of:

6. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.